# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

## ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ

**ಅಂಗಡಿ ಮಳಿಗೆಗಳನ್ನು ಹಂಚಿಕೆ ಮಾಡಲು 3ನೇ ಭಾರಿ ಟೆಂಡರ್ ಪ್ರಕಟಣೆ ದಿನಾಂಕ : 11-09-2024**

ಕೃಷಿ ವಿಶ್ವವಿದ್ಯಾನಿಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಆವರಣದಲ್ಲಿ ಉಪಹಾರ ಮಂದಿರ ಕಟ್ಟಡದಲ್ಲಿ 100 ಚದರ ಅಡಿ ವಿಸ್ತೀರ್ಣದ ಎರಡು ಅಂಗಡಿ ಮಳಿಗೆ ಸಂಖ್ಯೆ: 7 ಮತ್ತು 8 ಅನ್ನು ಮಾಸಿಕ ಬಾಡಿಗೆಯ ಮೇಲೆ ಪ್ರತಿ 11 ತಿಂಗಳಿಗೊಮ್ಮೆ ನವೀಕರಿಸುವ ಷರತ್ತಿಗೊಳಪಟ್ಟು 2 ವರ್ಷಗಳ ಅವಧಿಗೆ ನೀಡಲು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

**ಷೆಡ್ಯೂಲ್ ವಿವರ**

| | | |
|---|---|---|
| 1) | ಟೆಂಡರ್ ಫಾರಂ ಪಡೆಯಲು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ. | ದಿನಾಂಕ: 20-09-2024 ಅಪರಾಹ್ನ 12.30 ಗಂಟೆಯವರೆಗೆ |
| 2) | ಖಾಲಿ ಟೆಂಡರ್ ಫಾರಂ ನೀಡುವ ಪ್ರಾರಂಭಿಕ ದಿನಾಂಕ. | ದಿನಾಂಕ: 13-09-2024 ಪೂರ್ವಾಹ್ನ 9.00 ಗಂಟೆಯಿಂದ |
| 3) | ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ. | ದಿನಾಂಕ: 20-09-2024 ಅಪರಾಹ್ನ 2.00 ಗಂಟೆಯವರೆಗೆ |
| 4) | ಟೆಂಡರನ್ನು ತೆರೆಯುವ ದಿನಾಂಕ. | ದಿನಾಂಕ: 20-09-2024 ಅಪರಾಹ್ನ 2.30 ಗಂಟೆಗೆ |

ಆಸಕ್ತಿಯುಳ್ಳ ಅರ್ಜಿದಾರರು ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಅನುಭವ ಪ್ರಮಾಣ ಪತ್ರ ಹಾಗೂ ಹಾಗೂ ಸಕ್ಷಮ ಪ್ರಾಧಿಕಾರವು ನೀಡಿರುವ ರಹದಾರಿ ಪತ್ರದ ಪ್ರತಿಯೊಂದಿಗೆ ನಿಗದಿತ ಅಂಗಡಿ ಮಳಿಗೆಗೆ ಅರ್ಜಿ ನೀಡಬೇಕು ಹಾಗೂ ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಅರ್ಜಿಯೊಂದಿಗೆ ಖಾಲಿ ಟೆಂಡರ್ ಫಾರಂನ ಬೆಲೆ ರೂ.1,000=00 ಗಳ ಡಿಡಿಯನ್ನು "ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಗಾಕೃವಿಕೇ, ಬೆಂಗಳೂರು-65" ಇವರ ಹೆಸರಿಗೆ ಪಡೆದು ಸಲ್ಲಿಸುವುದು. ಬೇರೆ ಬೇರೆ ಮಳಿಗೆಗಳಿಗೆ ಪ್ರತ್ಯೇಕವಾದ ಅರ್ಜಿಗಳನ್ನು ಪಡೆಯಬೇಕಾಗಿರುತ್ತದೆ. **ರೂ.50,000=00** ಗಳನ್ನು ಮುಂಗಡ ಭದ್ರತಾ ಠೇವಣಿಯಾಗಿ ಟೆಂಡರ್ ಫಾರಂ ಜೊತೆ ಸಲ್ಲಿಸಬೇಕಾಗಿರುತ್ತದೆ. ಮುಂಗಡ ಭದ್ರತಾ ಹಣವನ್ನು ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಬೆಂಗಳೂರು, ಇವರ ಹೆಸರಿಗೆ ಪಡೆದು ಟೆಂಡರ್ ಫಾರಂ ಜೊತೆ ಲಗತ್ತಿಸುವುದು. ಅಂಗಡಿ ಮಳಿಗೆಗಳ ಹಂಚಿಕೆಯ ನಿಯಮಗಳು ಮತ್ತು ಕರಾರಿನ ನಿಯಮಗಳನ್ನು ಟೆಂಡರ್ ಫಾರಂ ಜೊತೆಯಲ್ಲಿ ಪಡೆಯಬಹುದು. ಕೃಷಿ ವಿಶ್ವವಿದ್ಯಾನಿಲಯವು ಯಾವುದೇ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತದೆ.

ಆಸ್ತಿ ಅಧಿಕಾರಿಗಳು